

## ಪ್ರಾರ್ಥನೆ

### ಘೋರಾಂಧಕಾರದೊಳು

ಘೋರಾಂಧಕಾರದೊಳು ಕಾರ್ಮುಗಿಲನುಟ್ಟು
ಮಿಂಚೆಂಬ ತೇಜಸದ ಬಳೆಯ ತೊಟ್ಟು
ಭೈರವನ ತಂಬಟೆಯ ಗುಡುಗಿನೊಳಗಿಟ್ಟು
ಬಾ, ಎನ್ನನೆಚ್ಚರಿಸು, ಜನನಿ—ಹೇ ಜವನ ಜನನಿ.
ಬಳೆಯ ಮಿಂಚಿನೊಳೆನ್ನ ಕಣ್ಣ ಜಡತನವಳಿಸು,
ಕಿವಿಯ ನಿದ್ದೆಯ ಕೆಡಿಸು ಗುಡುಗಿನಿಂದ;
ಕಾರ್ಮುಗಿಲ ರೌದ್ರದಲಿ ಎದೆಯ ಭೀತಿಯ ಬಿಡಿಸು;
ಬಾ, ಎನ್ನನೆಚ್ಚರಿಸು, ಜನನಿ—ಹೇ ಜವನ ಜನನಿ.
ಆರತಿಯ ಬೆಳಕಿನಲಿ ಕಣ್ದೆರೆಯಲಿಲ್ಲ,
ಕೊಳಲ ನಾದವ ಕೇಳಿ ಕಿವಿಯೇಳಲಿಲ್ಲ;
ಮೂರುತಿಯ ಕಂಡೆದೆಯು ಕಲ್ಲಾಗಲಿಲ್ಲ;
ಬಾ, ಎನ್ನನೆಚ್ಚರಿಸು, ಜನನಿ—ಹೇ ಜವನ ಜನನಿ. —ಕುವೆಂಪು

## ಸೂಕ್ತಿಪ್ರಭ



☛ ಅಭ್ಯಾಸವೆಂಬುದು ಸುಲಭವಾಗಿ ಅಂಟಿಸಿಕೊಳ್ಳಬಹುದಾದ ಅಂಟಿನ ಟೇಪಿನಂತೆ. ಹೆಚ್ಚು ಕಾಲ ಉಳಿದರೆ ಅದನ್ನು ತೆಗೆಯುವುದು ಕಠಿಣವಾಗುತ್ತದೆ. ಹಾಗೊಮ್ಮೆ ತೆಗೆದರೆ ಅದರೊಂದಿಗೆ ಚರ್ಮವೂ ಕಿತ್ತುಕೊಂಡು ಬರುತ್ತದೆ. —ಸಿಡ್ನಿ ಹ್ಯಾರಿಸ್.

☛ ಹಿರಿಯರೊಂದಿಗೆ ವಿನಯದಿಂದ ನಡೆದುಕೊಳ್ಳುವುದು ಕರ್ತವ್ಯ, ಸಮವಯಸ್ಕರೊಂದಿಗೆ ವಿನಯದಿಂದ ನಡೆದುಕೊಳ್ಳುವುದು ಸೌಜನ್ಯ. ತನಗಿಂತ ಕೆಳಗಿನ ಸ್ತರದವರೊಂದಿಗೆ ವಿನಯದಿಂದ ವರ್ತಿಸುವುದು ದೊಡ್ಡತನ. —ಬೆಂಜಮಿನ್ ಫ್ರಾಂಕ್ಲಿನ್.

☛ ದೀರ್ಘಕಾಲ ಜೀವಿಸಬೇಕೆಂದು ಎಲ್ಲರೂ ಬಯಸುತ್ತಾರೆ. ಎಲ್ಲೋ ಕೆಲವರು ಮಾತ್ರ ಉತ್ತಮ ಜೀವನದ ಗುರಿಯನ್ನು ಹೊಂದಿರುತ್ತಾರೆ. —ಜಾನ್ ಹೂಜಿಸ್.

☛ ನಡತೆಯು ನಮ್ಮ ವ್ಯಕ್ತಿತ್ವವನ್ನು ಪ್ರತಿಬಿಂಬಿಸುವ ಕನ್ನಡಿಯಂತೆ. — ಗಯಟೆ

☛ ಜ್ಞಾಪಕಶಕ್ತಿಯ ಕಲೆಯಿರುವುದು ಏಕಾಗ್ರತೆ ಹಾಗೂ ಆಸಕ್ತಿಯ ಕಲೆಗಳಲ್ಲಿ. -ಡಾ. ಜಾನ್ಸನ್.

☛ ಒಳ್ಳೆಯತನಕ್ಕೆ ತನ್ನದೇ ಆದ ಫಲವಿದೆ. —ಸಿಸಿರೋ.

☛ ಎಲ್ಲ ಆಕ್ಷೇಪಣೆಗಳನ್ನು ಮೊದಲು ಬಗೆಹರಿಸಬೇಕು ಎನ್ನುವುದಾದರೆ ಯಾವುದೇ ಕಾರ್ಯವನ್ನೂ ಜನ ಪ್ರಾರಂಭಿಸುವುದಿಲ್ಲ. —ಸ್ಯಾಮ್ಯುಯಲ್ ಜಾನ್ಸನ್.

☛ ತರ್ಕಕ್ಕಿಂತ ವಿನಯವೇ ಉತ್ತಮ. ನಯವಾಗಿ ಮನ ಒಲಿಸುವ ಮೂಲಕ ಅನೇಕ ವೇಳೆ ಒಪ್ಪಿಗೆ ಪಡೆಯುವುದು ಸಾಧ್ಯ.

☛ ಸ್ವಂತ ದುಡಿಮೆಯ ಅನ್ನಕ್ಕಿಂತ ರುಚಿಯಾದ ಪದಾರ್ಥ ಎಲ್ಲಿಯೂ ಇಲ್ಲ; ಅದನ್ನು ಯಾರೂ ತಿಂದೂ ಇಲ್ಲ.

☛ ಜನರೊಂದಿಗೆ ಇದ್ದು ಅವರ ಸಮಸ್ಯೆಗಳನ್ನು ತಿಳಿದುಕೊಳ್ಳಬೇಕು. ಅವುಗಳನ್ನು ಬಗೆಹರಿಸಲು ದೇವರೊಂದಿಗೆ ಇರಬೇಕು.


**ಆಧ್ಯಾತ್ಮಿಕ ಶಿಬಿರ (ಪುರುಷರಿಗಾಗಿ ಆವಾಸೀ ಕ್ಯಾಂಪ್) - 2005 ಡಿಸೆಂಬರ್ 3 ರಿಂದ 7 ರವರೆಗೆ ;**

ತರಗತಿಗಳನ್ನು ನಡೆಸುವ ಮಾಧ್ಯಮ: ಕನ್ನಡ ಮತ್ತು ಇಂಗ್ಲಿಷ್

ಐದು ದಿನಗಳ ಶಿಬಿರಕ್ಕಾಗಿ ತಗಲುವ ಊಟ, ವಸತಿಯ ವೆಚ್ಚ : 700/- ಮಾತ್ರ ;

ಪ್ರಾಸ್ಪೆಕ್ಟಸ್ ಮತ್ತು ಅರ್ಜಿಫಾರಂಗಾಗಿ ನಿಮ್ಮ ಸ್ವವಿಳಾಸವಿರುವ ಕವರಿಗೆ ರೂ.5ರ ಸ್ಟಾಂಪ್ ಲಗತ್ತಿಸಿ, ಕೆಳಗಿನ ವಿಳಾಸಕ್ಕೆ ಬರೆಯಿರಿ. ತುಂಬಿಸಿದ ಅರ್ಜಿಫಾರಂಗಳನ್ನು ಸ್ವೀಕರಿಸಲು ಕಡೆಯ ದಿನಾಂಕ: 26.11.2005:

**Ramakrishna Institute of Moral and Spiritual Education,** Yadavagiri, Mysore 570 020
Phone:0821-2417666, 2411140; FAX: 0821-2412800; e-mail: mysore.rimse@gmail.com